

## ಸಂದೇಶ ಕಾಲಂನಲ್ಲಿ...

ನಾನು ಗ್ರಾಮೀಣ ಭಾಗದಲ್ಲಿ ಅಂಚೆ ನೌಕರನಾಗಿ ಕೆಲಸ ನಿರ್ವಹಿಸುತ್ತೇನೆ. ಹಬ್ಬ–ಹರಿದಿನಗಳಂದು ಬಹಳ ಜನ ದೇವಸ್ಥಾನಗಳಿಗೆ ಹಣ ಕಳುಹಿಸಲು ಬರುತ್ತಾರೆ. ಹೆಚ್ಚಿನ ಜನರಿಗೆ ಮನಿ ಆರ್ಡರ್ ಫಾರಂ ನಾವೇ ತುಂಬಿಕೊಡುವುದು ಅನಿವಾರ್ಯ. ಒಂದು ದಿನ ಒಬ್ಬ ಅನಕ್ಷರಸ್ಥ ಹೆಂಗಸು ಮನಿ ಆರ್ಡರ್ ಕಳಿಸಲು ಬಂದರು. ಧರ್ಮಸ್ಥಳಕ್ಕೆ ಹಣ ಕಳುಹಿಸಬೇಕೆಂದು ಕೇಳಿದರು. ಸರಿ, ಯಥಾಪ್ರಕಾರ ಎಂ.ಓ. ಫಾರಂ ತುಂಬಿ ಕೊಟ್ಟ ನಾನು, ‘ಸಂದೇಶ ಕಾಲಂನಲ್ಲಿ ಏನಾದ್ರೂ ಬರೆಯಬೇಕೆ?’ ಎಂದು ಕೇಳಿದೆ. ಅದಕ್ಕೆ ಆ ಹೆಂಗಸು, ‘ನಮ್ಮ ಪಕ್ಕದ ಮನೆಯ ಹೆಂಗಸು ನಾನು ನೀರು ತರುವಾಗ ನನ್ನೊಂದಿಗೆ ಜಗಳ ಮಾಡುತ್ತಾಳೆ. ಅವಳ ಕೈ ಮುರಿಯಲಿ ಅಂತ ಬರೆಯಿರಿ’ ಅಂದಳು. ನಾನು ಹೌಹಾರಿದೆ.

**ಬಿಲ್ಲೇಶ್ವರ ಲಕ್ಷ್ಮೀರಮಣ**

**ಚಿತ್ರಗಳು: ಗಣೇಶ ಆಚಾರ್ಯ**

## ಮಾಲ್ ಇದೆಯಾ?

ನಮ್ಮ ಕಂಪನಿಯ ಸೇಲ್ಸ್ ಆಫೀಸರ್ ಹುಬ್ಬಳ್ಳಿಗೆ ಹೋಗಿದ್ದರು. ಅಲ್ಲಿನ ಉತ್ತಮ ಹೋಟೆಲ್‌ನಲ್ಲಿ ಅವರಿಗೆ ರೂಂ ಬುಕ್ ಮಾಡಲಾಗಿತ್ತು.
ಕಾನ್ಫರೆನ್ಸ್‌ಗೆ ಇನ್ನೂ ಎರಡು ಗಂಟೆ ಸಮಯವಿತ್ತು. ರೂಮ್ ಬಾಯ್ ಅನ್ನು ಕರೆದು, ‘ಇಲ್ಲಿ ಹತ್ತಿರದಲ್ಲಿ ಯಾವುದಾದರೂ ಮಾಲ್ ಇದೆಯಾ?’ ಎಂದು ಕೇಳಿದಾಗ ಆ ಹುಡುಗ ಮುಖಕ್ಕೆ ಗಂಟು ಹಾಕಿ, ಒಂದೂ ಮಾತನಾಡದೇ ಹೊರಟು ಹೋದ. ಸ್ವಲ್ಪ ಸಮಯದ ನಂತರ ಮಾಲೀಕ ಬಂದು, ‘ಸರ್, ನೀವು ನಮ್ಮ ಹುಡುಗನ ಬಳಿ ಏನೊ ಕೇಳಿದ್ರಂತೆ, ದಯವಿಟ್ಟು ಕ್ಷಮಿಸಿ, ನಮ್ಮ ಲಾಡ್ಜ್‌ನಲ್ಲಿ ಅಂಥದ್ದಕ್ಕೆಲ್ಲಾ ಅವಕಾಶವಿಲ್ಲ’ ಎಂದರು.
ಆಫೀಸರ್ ಗೊಂದಲಕ್ಕೊಳಗಾಗಿ, ‘ಅಲ್ಲಾ, ಹತ್ತಿರದಲ್ಲಿ ಎಲ್ಲಾದ್ರೂ ಮಾಲ್ ಇದೆಯಾ ಅಂತ ಕೇಳಿದೆ. ಟೈಮ್ ಇದೆ, ಸ್ವಲ್ಪ ಸುತ್ತಾಡಿಕೊಂಡು ಬರೋಣ ಅಂತ...’ ಎಂದಾಗ ಮಾಲೀಕ ಜೋರಾಗಿ ನಗುತ್ತಾ, ‘ಓ, ನಮ್ಮ ಹುಡುಗ ಹಳ್ಳಿಯಿಂದ ಬಂದವ ಸರ್, ಅವನಿಗೆ ಗೊತ್ತಿರುವ ಮಾಲ್ ಒಂದೆ...’ ಎಂದರು.

**ರೋಹಿಣಿ ಹತ್ವಾರ್**

